ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ; ನ್ಯಾಯಾಲಯ, ಶ್ರೀರಂಗಪಟ್ಟಣ.

ಸಿ.ಸಿ.ಃ 388/2018

ಪಿ. ಡಬ್ಲ್ಯು: 01

ಸಿ. ಡಬ್ಲ್ಯು: 01

| | | |
|---|---|---|
| ಸಾಕ್ಷಿದಾರರ ಹೆಸರು | ಃ | ಅಭಿಲಾಷಾ.ಎನ್ |
| ತಂದೆ/ಪತಿಯ ಹೆಸರು | ಃ | ರಾಜು.ಆರ್ |
| ವಯಸ್ಸು | ಃ | 28 ವರ್ಷ |
| ವೃತ್ತಿ | ಃ | ಮಹಿಳಾ ಪೋಲೀಸ್ ಮುಖ್ಯ ಪೇದೆ- 443 |
| ವಾಸ | ಃ | ಬೆಂಗಳೂರು |

ಸಾಕ್ಷಿಗೆ ಪ್ರಮಾಣ ವಚನ ಮಾಡಿಸಿದ ದಿನಾಂಕಃ

07.12.2021

ಮುಖ್ಯ ವಿಚಾರಣೆಃ ಮಾನ್ಯ ಎ ಪಿ ಪಿ ರವರಿಂದ

ದಿಃ 20.06.2016 ರಿಂದ 31.10.2021 ರವೆರೆಗೆ ಕೆ.ಆರ್.ಎಸ್.ಪೋಲೀಸ್ ಠಾಣೆಯಲ್ಲಿ ಮಹಿಳಾ ಪೊಲೀಸ್ ಪೇದೆಯಾಗಿ ಕರ್ತವ್ಯ ನಿರ್ವಹಿಸಿದ್ದೇನೆ.

ದಿಃ 13.03.2018 ರಂದು ಬೃಂದಾವನ ಗಾರ್ಡನ್ ನ ಬೋಟಿಂಗ್ ಪಾಯಿಂಟ್ ಹತ್ತಿರ ನಾನು ನನ್ನ ಸಹೋದ್ಯೋಗಿ ಅನುಸೂಯ ರವರ ಜೊತೆ ಕರ್ತವ್ಯ ನಿರ್ವಹಿಸುತ್ತಿದ್ದೆ . ಮಧ್ಯಾಹ್ನ 12.00 ಗಂಟೆ ಸಮಯದಲ್ಲಿ ನಾನು ಮತ್ತು ನನ್ನ ಸಹೋದ್ಯೋಗಿ ಬೋಟಿಂಗ್ ಪಾಯಿಂಟ್ ಹತ್ತಿರ ಇದ್ದ ಶೌಚಾಲಯಕ್ಕೆ ಹೋಗಿದ್ದೇವು. ಆಗ ನಮಗೆ ಯಾರೋ ಬಂದ ಹಾಗೆ ಆಯಿತು. ನೋಡಿದಾಗ ಅಲ್ಲಿ ಒಬ್ಬ ವ್ಯಕ್ತಿ ಇದಿದ್ದು ಕಂಡು ಬಂದಿತು. ನಾನು ಆಗ ಆತನನ್ನು ಇದು ಮಹಿಳಾ ಶೌಚಾಲಯ ಪಕ್ಕದಲ್ಲಿ ಗಂಡಸರ ಶೌಚಾಲಯ ಇರುತ್ತದೆ ಅಲ್ಲಿಗೆ ಹೋಗಿ ಎಂದು ಹೇಳಿದೆನು. ನಂತರ ಆತ ಅಲ್ಲಿಂದ ಹೊರ ಹೋಗಿದ್ದು ತಕ್ಷಣ ಮತ್ತೆ ಅದೇ ತರ ನಾವು ಇದ್ದ ಶೌಚಾಲಯಕ್ಕೆ ಬಂದಿರುತ್ತಾರೆ. ಅದೇ ರೀತಿ ಮೂರು ಬಾರಿ ಆತ ಅಲ್ಲಿಗೆ ಬಂದಿದ್ದು ಆತನನ್ನು ನಾವು ಪ್ರಶ್ನಿಸಿದಾಗ ವಿದ್ಯುತ್ ಸಂಪರ್ಕ ಪಡೆಯಲು ಬಂದಿದ್ದೇನೆ ಎಂದು ತಿಳಿಸಿರುತ್ತಾನೆ.

ನಾವು ಹೊರಗೆ ಬಂದು ಆತನನ್ನು ಪದೇ ಪದೇ ಈ ರೀತಿ ಏಕೆ ಬರುತ್ತಿದ್ದೀರಿ ಪಕ್ಕದಲ್ಲೇ ಗಂಡಸರ ಶೌಚಾಲಯ ಇದ್ದು ಅಲ್ಲಿ ವಿದ್ಯುತ್ ಸಂಪರ್ಕ ಪಡೆಯ ಬಹುದಿತ್ತು ಎಂದು ಆತನಿಗೆ ಹೇಳಿದಾಗ ಆತ ನಮಗೆ ಅವಾಚ್ಯ ಶಬ್ದಗಳಿಂದ ಬೈದು ಸರ್ಕಾರಿ ಕೆಲಸಕ್ಕೆ ಅಡ್ಡಿ ಪಡಿಸಿರುತ್ತಾರೆ. ಅಲ್ಲೇ ಇದ್ದ ಚಪ್ಪಲಿ ಅಂಗಡಿಯ ಪ್ರಸನ್ನ ಕುಮಾರ್ ಎನ್ನುವವರು ಸ್ಥಳಕ್ಕೆ ಬಂದು ಈತ ನನ್ನ ಮಗ ಆತನ ಹೆಸರು ನಿಶ್ಚಿತ್ ಕುಮಾರ್ ಎಂದು ತಿಳಿಸಿ ಅಲ್ಲಿಂದ ಆತನನ್ನು ಕರೆದುಕೊಂಡು

ಹೋಗಿರುತ್ತಾರೆ. ನಂತರ ನಾವು ನಮ್ಮ ಕರ್ತವ್ಯ ಸ್ಥಳಕ್ಕೆ ಹೋಗಿ ಅಲ್ಲಿದ್ದ ಮೇಲ್ವಿಚಾರಕರಿಗೆ ನಡೆದ ಘಟನೆಯ ಬಗ್ಗೆ ಮಾಹಿತಿ ನೀಡಿರುತ್ತೇವೆ. ನಂತರ ಅವರು ಮೇಲಾಧಿಕಾರಿಯವರಿಗೆ ವಿಷಯ ತಿಳಿಸಿದಾದ ಮೇಲೆ ರಾತ್ರಿ 08.15 ಗಂಟೆ ಸಮಯದಲ್ಲಿ ಆರೋಪಿತನ ವಿರುದ್ದ ಕೆ.ಆರ್.ಎಸ್. ಪೋಲೀಸ್ ಠಾಣೆಯಲ್ಲಿ ದೂರನ್ನು ದಾಖಲು ಮಾಡಿರುತ್ತೇನೆ.

ನಂತರ ದಿಃ 14.03.2018 ರಂದು ಮಧ್ಯಾಹ್ನ 03.30 ಗಂಟೆ ಸಮಯದಲ್ಲಿ ಕೆಆರ್.ಎಸ್. ಪೋಲೀಸ್ ಠಾಣೆಯ ಪೋಲೀಸರು ಘಟನೆ ನಡೆದ ಸ್ಥಳಕ್ಕೆ ಬಂದು ನಾನು ತೋರಿಸಿದ ಜಾಗದಲ್ಲಿ ಸ್ಥಳ ಮಹಜರ್ ಮಾಡಿರುತ್ತಾರೆ. ದಿಃ19.03.2018 ರಂದು ನಾನು ಮಾನ್ಯ ನ್ಯಾಯಾಲಯಕ್ಕೆ ಬಂದು ನ್ಯಾಯಾಧೀಶರ ಸಮ್ಮುಖ ಕಲಂ.164 ರಡಿಯಲ್ಲಿ ಹೇಳಿಕೆಯನ್ನು ನೀಡಿರುತ್ತೇನೆ.

ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ಈ ದಿನ ನ್ಯಾಯಾಲಯದ ಮುಂದಿರುವ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿಯು ತಾನು ನೀಡಿದ್ದ ದೂರನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ.1 ಎಂದು ಹಾಗೂ ಅದರಲ್ಲಿನ ಸಾಕ್ಷಿಯ ಸಹಿಯನ್ನು ನಿಪಿ.1.ಎ. ಎಂದು ಗುರುತಿಸಲಾಯಿತು. ಸಾಕ್ಷಿಗೆ ಸ್ಥಳ ಮಹಜರ್ ಅನ್ನು ತೋರಿಸಲಾಗಿ ಅದರಲ್ಲಿ ತನ್ನ ಸಹಿ ಇದೆ ಎಂದು ಗುರುತಿಸಿದ್ದು ಸ್ಥಳ ಮಹಜರ್ ಅನ್ನು ನಿಪಿ.2 ಹಾಗೂ ಅದರಲ್ಲಿನ ಸಾಕ್ಷಿಯ ಸಹಿಯನ್ನು ನಿಪಿ.2.ಎ. ಎಂದು ಗುರುತಿಸಲಾಯಿತು. ಸಾಕ್ಷಿಯು ದಿಃ19.03.2018 ರಂದು ಮಾನ್ಯ ನ್ಯಾಯಾಧೀಶರ ಸಮ್ಮುಖ ನೀಡಿದ್ದ ಹೇಳಿಕೆಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ.3 ಎಂದು ಅದರಲ್ಲಿನ ಸಾಕ್ಷಿಯ ಸಹಿಗಳನ್ನು ನಿಪಿ.3.ಎ ಮತ್ತು ನಿಪಿ.3.ಬಿ ಎಂದು ಗುರುತಿಸಲಾಯಿತು.

**<u>ಪಾಟಿ ಸವಾಲುಃ ಆರೋಪಿ ಪರ ಶ್ರೀ.ಸಿ.ಆರ್.ಎಸ್. ವಕೀಲರಿಂದ</u>**

ಘಟನೆ ನಡೆಯಿತು ಎನ್ನುವ ದಿನ ನನ್ನನ್ನು ಬೆಳಿಗ್ಗೆ 08.00 ಗಂಟೆಯಿಂದ ಮಧ್ಯಾಹ್ನ 02.00 ಗಂಟೆ ವರೆಗೆ ಕರ್ತವ್ಯಕ್ಕೆ ನೇಮಿಸಲಾಯಿತು. ನನ್ನನ್ನು ಆ ದಿನ ಬೋಟಿಂಗ್ ಪಾಯಿಂಟ್ ಹತ್ತಿರದ ಸಾವರ್ಜನಿಕರು ಬರುವ ಸ್ಥಳದಲ್ಲಿ ಕತರ್ವ್ಯಕ್ಕೆ ನೇಮಿಸಲಾಯಿತು. ಆ ದಿನ ನನ್ನ ಜೊತೆ ಮಹಿಳಾ ಪೇದೆ ಅನುಸೂಯ, ಒಬ್ಬ ಎ.ಎಸ್.ಐ ಹಾಗೂ ಒಬ್ಬರು ಪೋಲೀಸ್ ಪೇದೆಯನ್ನು ಕತರ್ವಕ್ಕೆ ನೇಮಿಸಲಾಯಿತು. ಎ.ಎಸ್.ಐ ರವರ ಹೆಸರು ಶಿವಣ್ಣ ಎಂದು ಇತ್ತು. ಪೋಲೀಸ್ ಪೇದೆಯ ಹೆಸರು ನೆನಪಿಲ್ಲ.

ಶೌಚಾಲಯ ಬೊಟಿಂಗ್ ಪಾಯಿಂಟ್ ಇಂದ ಸುಮಾರು 100 ಮಿ. ಅಂತರದಲ್ಲಿದೆ. ಶೌಚಾಲಯ ನೋಡಿಕೊಳ್ಳಲು ಒಬ್ಬರು ಪಾಲಕರು ಇರುತ್ತಾರೆ ಎಂದರೆ ನಿಜ. ಬೋಟಿಂಗ್

ಪಾಯಿಂಟ್ ಹತ್ತಿರ ಟಿಕಟ್ ಕೌಂಟರ್, ಅಂಗಡಿ ವೈಗೈರುಗಳು ಇವೆ ಎಂದರೆ ನಿಜ. ಕೆ.ಆರ್.ಎಸ್. ಒಳಗಡೆ ನೀರಾವರಿ ಇಲಾಖೆ, ತೋಟಗಾರಿಕೆ ಇಲಾಖೆ ಸಿಬ್ಬಂದಿಗಳು ಇರುತ್ತಾರೆ ಎಂದರೆ ನಿಜ. ಸದರಿ ಜಾಗ ಪ್ರೇಕ್ಷಣೀಯ ಸ್ಥಳವಾದರಿಂದ ಸಾರ್ವಜನಿಕರು ಇರುತ್ತಾರೆ ಎಂದರೆ ನಿಜ.

ಆರೋಪಿ ನಾವು ಇದ್ದ ಶೌಚಾಲಯಕ್ಕೆ ಬಂದ ಸಮಯದಲಿ ಬೇರೆ ಸಾರ್ವಜನಿಕರು ಯಾರು ಇರಲಿಲ್ಲ. ಆರೋಪಿ ಶೌಚಾಲಯದ ಒಳಗಡೆ ವಿದ್ಯುತ್ ಸಂಪರ್ಕ ಪಡೆಯಲು ಬಂದಿದ್ದೆ ಎಂದು ತಿಳಿಸಿದ ವಿಚಾರಕ್ಕೆ ಸಂಬಂದಿಸಿದಂತೆ ವಿದ್ಯುತ್ ಸಂಪರ್ಕ ಪಡೆದ ಬಗ್ಗೆ ನೋಡಿಲ್ಲ. ಶೌಚಾಲಯದ ಹೊರಗೆ ಬಂದ ಮೇಲೆ ಆರೋಪಿಗೂ-ನಮಗೂ 15 ನಿಮಿಷಕ್ಕೂ ಜಾಸ್ತಿ ಸಮಯ ವಾಗ್ವಾದ ನಡೆದಿರುತ್ತದೆ. ವಾಗ್ವಾದ ನಡೆಯುವ ಸಮಯದಲ್ಲಿ ಸಾರ್ವಜನಿಕರಾಗಲಿ ಅಥವಾ ನಮ್ಮ ಎ.ಎಸ್.ಐ ಮತ್ತು ಪೋಲೀಸ್ ಪೇದೆ ಅಲ್ಲಿಗೆ ಬರಲಿಲ್ಲ. ಘಟನೆ ನಡೆದ್ದದನ್ನು ನಮ್ಮ ಎ.ಎಸ್.ಐ ಮತ್ತು ಪೋಲೀಸ್ ಪೇದೆ , ಅಲ್ಲಿದ್ದ ಅಂಗಡಿಯ ವ್ಯಾಪಾರಸ್ಥರು ನೋಡಿರುವುದಿಲ್ಲ ಆದರೇ ಹಣ್ಣಿನ ಅಂಗಡಿಯ ರಾಜು ಎನ್ನುವವರು ನೋಡಿರುತ್ತಾರೆ.

ಘಟನೆ ನಡೆದ ತಕ್ಷಣ ನಾನು ನಡೆದ ವಿಚಾರವನ್ನು ನಮ್ಮ ಎ.ಎಸ್.ಐ. ಶಿವಣ್ಣ ರವರಿಗೆ ಮಧ್ಯಾಹ್ನ 12.30 ಗಂಟೆ ಸಮಯದೊಳಗೆ ಮಾಹಿತಿ ನೀಡಿದ್ದೇನೆ. ನಂತರ ಮಧ್ಯಾಹ್ನ 02.00 ಗಂಟೆ ವರೆಗೆ ನಾನು ಕರ್ತವ್ಯ ನಿರ್ವಹಿಸಿದ್ದೇನೆ. ನಾನು ಘಟನೆ ನಡೆದ ತಕ್ಷಣ ಮಧ್ಯಾಹ್ನ 12.30 ಗಂಟೆ ಸಮಯದಲ್ಲಿ ಪೋಲೀಸರಿಗೆ ದೂರನ್ನು ನೀಡಿಲ್ಲ. ನಾನು ಮಾಹಿತಿ ನೀಡಿದಾದ ಮೇಲೆ ಎ.ಎಸ್.ಐ ರವರು ಘಟನೆ ಬಗ್ಗೆ ಮೇಲಾಧಿಕಾರಿಯವರಿಗೆ ತಿಳಿಸಿರುತ್ತಾರೆ. ನಾನು ದೂರನ್ನು ನಮ್ಮ ಮೇಲಾಧಿಕಾರಿಗಳ ಗಮನಕ್ಕೆ ತಂದು ಕೊಡಬೇಕಾದ ಕಾರಣ ತಕ್ಷಣವೇ ದೂರನ್ನು ಕೊಡಲು ಆಗಿರಲಿಲ್ಲ. ಸದರಿ ವಿಚಾರದ ವಿವರಣೆಯನ್ನು ನನ್ನ ದೂರಿನಲ್ಲಿ ತೋರಿಸಿಲ್ಲ. ಸದರಿ ವಿವರಣೆಯನ್ನು ನನ್ನ ದೂರಿನಲ್ಲಿ ಬರೆಯಲು ತೊಂದರೆ ಇರಲಿಲ್ಲ ಕಾರಣ ನಾನು ಆ ಸಮಯದಲ್ಲಿ ಆಘಾತಕ್ಕೆ ಒಳಗಾಗಿದ್ದೆ. ಯಾವ ನಿರ್ದಿಷ್ಟ ಅವಾಚ್ಯ ಶಬ್ದಗಳಿಂದ ಆರೋಪಿ ಬೈದಿದ್ದ ಎಂದು ನನ್ನ ದೂರಿನಲ್ಲಿ ನಮೂದಿಸಲು ತೊಂದರೆ ಇತ್ತು. ನಾನು ಜವಾಬ್ದಾರಿಯುತ್ತ ಮಹಿಳೆಯಾದ್ದರಿಂದ ಆರೋಪಿ ಬಳಸಿದ ಕೆಟ್ಟ ಪದಗಳನ್ನು ದೂರಿನಲ್ಲಿ ನಮೂದಿಸಲು ತೊಂದರೆ ಇತ್ತು.

ಆರೋಪಿಯ ತಂದೆ ನಮ್ಮ ಠಾಣೆಯ ಪಿ.ಎಸ್.ಐ ರವರ ವಿರುದ್ದ ಒಂದು ಸಿವಿಲ್ ದಾವೆಯನ್ನು ಇದೇ ನ್ಯಾಯಾಲಯದಲ್ಲಿ ಅಸಲು ದಾವಾ.139/2015 ರಂತೆ ದಾಖಲಿಸಿದ್ದಾರೆ ಈ ಬಗ್ಗೆ ತಮಗೆ ಮಾಹಿತಿ ಇದೆಯಾ ಎನ್ನುವ ಪ್ರಶ್ನೆಗೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ.

ಆರೋಪಿಯ ತಂದೆಗೆ ನಮ್ಮ ಪಿ.ಎಸ್.ಐ ರವರು ದಾವೆ ಸಲ್ಲಿಸಿದ್ದ ಕಾರಣಕ್ಕೆ ಅವರ ಅಂಗಡಿಯ ಹತ್ತಿರ ಹೋಗಿ ತೊಂದರೆ ನೀಡುತ್ತಿದ್ದರು ಮತ್ತು ಅದಕ್ಕೆ ಪೂರಕವಾಗಿ ನಮ್ಮನ್ನು ದಾಳವಾಗಿ ಉಪಯೋಗಿಸಿಕೊಂಡು ಆರೋಪಿಯ ವಿರುದ್ದ ಯಾವುದೇ ಕೃತ್ಯವೆಸಗಿಲ್ಲದಿದ್ದರೂ ಸುಳ್ಳು ಕೇಸನ್ನು ದಾಖಲಿಸಿದ್ದಾರೆ ಎಂದರೆ ಸರಿಯಲ್ಲ. ಆರೋಪಿ ಯಾವುದೇ ಕೃತ್ಯ ವೆಸಗಿರುವುದಿಲ್ಲ ಮತ್ತು ಅದರಿಂದ ನಮಗೆ ಯಾವುದೇ ಗೌರವಕ್ಕೆ ಕುಂದು ಉಂಟಾಗಿಲ್ಲ ಹಾಗೂ ನಮಗೆ ಯಾವುದೇ ಅವಮಾನ ಆಗಿಲ್ಲ ಎಂದರೆ ಸರಿಯಲ್ಲ. ಯಾವುದೇ ಘಟನೆ ನಡೆಯದಿದ್ದ ಕಾರಣ ನನಗೆ ನೇಮಿಸಿದ್ದ ಕರ್ತವ್ಯವನ್ನು ನಾನು ಪೂರ್ಣವಾಗಿ ಆ ದಿನ ನಿರ್ವಹಿಸಿದ್ದೇನೆ ಮತ್ತು ದೂರನ್ನು ಅದೇ ಕಾಲಕ್ಕೆ ನೀಡಿಲ್ಲ ಎಂದರೆ ಸರಿಯಲ್ಲ.

ನನ್ನ ಜೊತೆ ಚಾಸಾ.2 ರವರು ಬೆಳಿಗ್ಗೆ ಕರ್ತವ್ಯದ ಸಮಯದಿಂದ ಕರ್ತವ್ಯ ಪೂರ್ಣಗೊಳ್ಳುವ ತನಕ ಕರ್ತವ್ಯ ನಿರ್ವಹಿಸಿದ್ದರು. ನಮ್ಮ ಪಿ.ಎಸ್.ಐ ರವರು ನನ್ನ ಮೇಲಾಧಿಕಾರಿಯಾದ್ದರಿಂದ ಅವರಿಗೆ ಸಹಾಯವಾಗಲಿ ಎನ್ನುವ ದೃಷ್ಟಿಯಿಂದ ಅವರ ಮಾತು ಕೇಳಿ ಆರೋಪಿ ವಿರುದ್ದ ಯಾವುದೇ ಘಟನೆ ನಡೆಯದಿದ್ದರೂ ಸುಳ್ಳು ದೂರನ್ನು ನೀಡಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ.2 ಮಹಜರ್ ಅನ್ನು ಕೆ.ಆರ್.ಎಸ್. ಠಾಣೆಯ ಪೋಲೀಸನವರು ಜರುಗಿಸಿರುತ್ತಾರೆ. ಮಹಜರ್ ನಲ್ಲಿ ನಮೂದಿಸಿರುವ ಚೆಕ್ಕುಬಂದಿಯನ್ನು ಹೇಳಲಾಗುವುದಿಲ್ಲ. ಪೋಲೀಸ್ ನವರು ನಿಪಿ.2 ಮಹಜರ್ ಅನ್ನು ಕೃತ್ಯ ನಡೆದ ಜಾಗದಲ್ಲಿ ಬಂದು ತಯಾರಿಸಿಲ್ಲ ಠಾಣೆಯಲ್ಲಿ ತಯಾರಿಸಿದ ಮಹಜರ್ ಗೆ ನಾನು ಅಲ್ಲಿಯೇ ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

ನನ್ನ ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಸಾ.ಓ.ಹೇ.ಸ.ಒ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆಎಂಎಫ್‌ಸಿ., ಶ್ರೀರಂಗಪಟ್ಟಣ.